# ಭವಿಷ್ಯದ ಭಯಕ್ಕೆ ಕೆಲಸ ಬಿಟ್ಟೆ



**ದರ್ಶಕ್ ಉದಯದ 'ಕಾವ್ಯಾಂಜಲಿ'ಯ ಸಿದ್ಧಾರ್ಥ ಅರಸ್**

◆ **ಮುಂದಿನ ದಾರಿಯ ಬಗ್ಗೆ ಏನು ಯೋಚನೆ ಮಾಡಿದ್ದೀರಿ?**

ಯಾವತ್ತು ನಾನು ಕಿರುತೆರೆಗೆ ಬರುತ್ತೇನೆ ಎನ್ನುವ ಯೋಚನೆಯನ್ನೇ ಮಾಡಿರಲಿಲ್ಲ. ಸಿನಿಮಾದಲ್ಲೇ ನಟಿಸಬೇಕು ಎನ್ನುವ ಕನಸು ಕಂಡಿದ್ದೆ. ಹೀಗಿರುವಾಗ ನಿರ್ದೇಶಕರೊಬ್ಬರು 'ಯಾವ ಭರವಸೆ ಇಟ್ಟುಕೊಂಡು ನಿರ್ಮಾಪಕ ನಿನ್ನ ಮೇಲೆ ಹಣ ಹೂಡುತ್ತಾನೆ. ಮೊದಲು ನಿನ್ನನ್ನು ನೀನು ಗುರುತಿಸಿಕೊಳ್ಳುವ ನಿಟ್ಟಿನಲ್ಲಿ ಪುಟ್ಟ ಪುಟ್ಟ ಅವಕಾಶಗಳನ್ನೂ ಬಳಸಿಕೊ. ಟೀವಿಯಲ್ಲಿ ಅವಕಾಶ ಸಿಗಬಹುದು. ಹಂತ ಹಂತವಾಗಿ ಮೇಲೇರಿ ಬಾ' ಎಂಬ ಬುದ್ಧಿಮಾತನ್ನು ಹೇಳಿದರು. ಆನಂತರ ಕಿರುತೆರೆಗೆ ಆಡಿಷನ್ ನೀಡಲು ಆರಂಭಿಸಿದೆ. ಅದೂ ಸುಲಭದ ಹಾದಿಯಾಗಿರಲಿಲ್ಲ ಎನ್ನುವುದು ಆಮೇಲೆ ಗೊತ್ತಾಯಿತು. ಹಲವು ಆಡಿಷನ್ ನೀಡಿದೆ. ಉದಯದಲ್ಲಿ 'ಕಣ್ಮಣಿ'ಗೆ ಅವಕಾಶ ಸಿಕ್ಕಿತು. ಇದಕ್ಕೂ ಮೊದಲು ತಮಿಳಿನ 'ಅರುಂಧತಿ'ಯಲ್ಲಿ ಮಾಡಿದೆ. ಕಲರ್ಸ್ ಕನ್ನಡದಲ್ಲಿ 'ಪದ್ಮಾವತಿ'ಯಲ್ಲಿ ನಟಿಸಿದೆ. ಸತತ ಪ್ರಯತ್ನ ಇದ್ದರೂ ಅವಕಾಶ ಸಿಗುವುದು ಸ್ವಲ್ಪ ತಡವಾಯಿತು.
ಈ ಮೊದಲು ನೆಗೆಟಿವ್ ವ್ಯಕ್ತಿತ್ವವನ್ನು ಆವರಿಸಿದ್ದ ನಾನು ಮೊದಲ ಬಾರಿಗೆ ಪಾಸಿಟಿವ್ ಪಾತ್ರಕ್ಕೆ ಜೀವವನ್ನು ತುಂಬುತ್ತಿದ್ದೇನೆ. ಮೊದಲಿನಿಂದಲೂ ಕಲಾವಿದ ಆಗಬೇಕು ಎನ್ನುವ ಕನಸು ಇತ್ತೇ ಹೊರತು ದೊಡ್ಡ ಹೀರೊ ಆಗಿ ಬಿಂಬಿಸಿಕೊಳ್ಳಬೇಕು ಎನ್ನುವುದಲ್ಲ. ನಟನಾಗಿ ಅದ್ಭುತವಾಗಿ ನನ್ನನ್ನು ನಾನು ಅನಾವರಣ ಮಾಡಿಕೊಳ್ಳಬೇಕು. ಅದಕ್ಕಾಗಿ ಬೇಕಾದ ತಾಲೀಮು ಮತ್ತು ಕಸರತ್ತನ್ನು ಮಾಡುತ್ತಲೇ ಇರುತ್ತೇನೆ. ಅಭಿನಯದ ದೃಷ್ಟಿಯಿಂದ ಅತ್ಯಂತ ಕಷ್ಟ ಎನ್ನಬಹುದಾದ ಪಾತ್ರದ ಸಿನಿಮಾಕ್ಕೆ ಅತ್ಯುತ್ತಮವಾಗಿ ನಟಿಸಬೇಕು ಎನ್ನುವ ಯೋಚನೆ ಇದೆ.

◆ **ಸಿನಿಮಾದಲ್ಲಿ ತಾಂತ್ರಿಕವಾಗಿ ಏನಾದರೂ ಪ್ರಯೋಗ ಮಾಡಿದ್ದೀರಾ?**

ಮೊದಲು ನನಗೆ ಫೋಟೊಗ್ರಫಿ ಹವ್ಯಾಸವಿದೆ. ಆದರೆ, ಎಡಿಟಿಂಗ್ ಅಷ್ಟಾಗಿ ಬರಲ್ಲ. ಕ್ಯಾಮೆರಾ ಹಿಂದೆ ಕುತೂಹಲದ ಕಣ್ಣು ಮಾತ್ರ ಮೊದಲಿಂದ ಇತ್ತು. ನನ್ನ ಗೆಳೆಯ ಕಿರುಚಿತ್ರ ಮಾಡಲು ಕಥೆ ಮಾಡಿದ್ದ. ಆಗ ನಾನು ಜಾಬ್ ಮಾಡುತ್ತಿದ್ದೆ. ವಾರಾಂತ್ಯದಲ್ಲಿ ಅವನಿಗೆ ಸಹಾಯ ಮಾಡಲು ಮುಂದಾದೆ. ಕಿರುಚಿತ್ರಕ್ಕೆ ಸಣ್ಣ ಮಾರ್ಗದರ್ಶನ ನೀಡುವ ಜೊತೆ ಚಿತ್ರೀಕರಣ ಮಾಡಿದೆ. ಆಗ ಅದರ ಶ್ರಮ– ಸವಾಲು ಅರ್ಥವಾಯಿತು. ಕ್ಯಾಮೆರಾ ಸಂಪೂರ್ಣ ನಾನೊಬ್ಬನೇ ನಿರ್ವಹಿಸಬೇಕಿತ್ತು. ಫೋಕಸ್ ಅಂದರೆ ಏನು ಅನ್ನುವುದು ಗೊತ್ತಾಯಿತು. ಸಣ್ಣ ತಪ್ಪಾದರೂ ಪುನಃ ಹೊಸದಾಗಿ ಚಿತ್ರೀಕರಿಸಬೇಕಿತ್ತು. ಕ್ಯಾಮೆರಾ ಹಿಂದಿನ ಶ್ರಮ ಅರ್ಥ ಆಯಿತು.

◆ **ಓದುವಾಗ ಏನಾಗಬೇಕು ಎನ್ನುವ ಕನಸು ನಿಮಗೆ ಇತ್ತು?**

ವಿದ್ಯಾರ್ಹತೆಯಿಂದ ಮೆಕಾನಿಕಲ್ ಎಂಜಿನಿಯರ್. ಬಿಇ ಓದುವಾಗಲೇ ಸೃಜನಶೀಲವಾಗಿ ಏನಾದರೂ ಮಾಡಬೇಕು ಎನ್ನುವ ಆಸೆ ನನ್ನದು. ನನ್ನ ತಂದೆ ಜರ್ಮನಿಗೆ ಮಾಸ್ಟರ್ಸ್ ಮಾಡಿಸಲು ಕಳಿಸಬೇಕು ಎಂದುಕೊಂಡಿದ್ದರು. ನನಗೂ ಆಗ ಆಸೆ ಇತ್ತು. ಆದರೆ ಅಷ್ಟರಲ್ಲಿ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಕನಸೂ ಚಿಗುರು ಒಡೆದಿತ್ತು. ಅದನ್ನು ನನ್ನ ಗೆಳೆಯರ ಹತ್ತಿರ ಹೇಳಿದರೆ ಅವರೆಲ್ಲ ಕಾಮಿಡಿಯಂತೆ ತೆಗೆದುಕೊಂಡರು. ನಾನೇನಾದರೂ ಜರ್ಮನಿಗೆ ಹೋದರೆ ಸಂಪೂರ್ಣ ಎಂಜಿನಿಯರ್ ಆಗಿಯೇ ಜೀವನ ಕಳೆಯಬೇಕಾಗುತ್ತದೆ ಎಂದು ಯೋಚಿಸಿದೆ. ಇಲ್ಲೇ ಎಂಟೆಕ್ ಪ್ರವೇಶ ಪರೀಕ್ಷೆ ಬರೆದೆ ಸೀಟು ಪಡೆದೆ. ಎಂಟೆಕ್ ಸೇರಿ ಒಂದು ಆರು ತಿಂಗಳ ನಂತರ ನನ್ನ ಕನಸಿಗೆ ರಕ್ಕೆ ಮೂಡಲು ಆರಂಭವಾಯಿತು. ಹೊಸ ಹೊಸ ನಿರ್ದೇಶಕರು– ಕಥೆಗಾರರ ಭೇಟಿ ಮಾತುಕತೆ ಆಯಿತು. ಸಣ್ಣ ಯಶಸ್ಸು ಗಳಿಸಿದ ತಂತ್ರಜ್ಞರ ಪರಿಚಯವೂ ಆಯಿತು. ಅಂತಹ ಸಂದರ್ಭದಲ್ಲೇ ನನ್ನ ಸಾಮರ್ಥ್ಯ ತೋರಿಸುವ ಅಗತ್ಯ ಇದೆ ಎನ್ನುವ ಅರಿವು ಬಂತು. ಅಷ್ಟರಲ್ಲಿ ನನಗೆ ಕ್ಯಾಂಪಸ್ ಸಂದರ್ಶನದಲ್ಲಿ ಕೆಲಸ ಸಿಕ್ಕಿತು. ಸ್ವಲ್ಪ ದಿನದಲ್ಲಿ ಮತ್ತೊಂದು ಕಂಪನಿಗೆ ಕೆಲಸ ಬದಲಿಸಿದೆ. ನನ್ನ ಖರ್ಚು ವೆಚ್ಚಕ್ಕೆ ಸಂಪಾದಿಸುವ ತುರ್ತಿಗೆ ಕೆಲಸ ಎಂದು ಭಾವಿಸಿದೆ. ಆದರೆ ನನ್ನ ಕನಸಿಗೆ ಕಾವುಕೊಡಲು ಸಮಯ ಇಲ್ಲದಂತೆ ಆಗುತ್ತಿತ್ತು. ವಾರಾಂತ್ಯದ ಪ್ರಯತ್ನ ಸಾಲದು ಎಂದು ಕೆಲಸ ಬಿಟ್ಟೆ. ಏಕೆಂದರೆ ನನ್ನ ಭವಿಷ್ಯವನ್ನು ನಾನು ಬಣ್ಣದ ಜಗತ್ತಿನಲ್ಲಿ ಕಟ್ಟಿಕೊಳ್ಳಬೇಕಿತ್ತು. ಆಗ ನಮ್ಮ ಪೋಷಕರು ತಮ್ಮ ಆತಂಕವನ್ನು ತೋಡಿಕೊಂಡರು. ಕೆಲಸ ಬಿಟ್ಟು ಏನು ಮಾಡ್ತೀಯಾ? ಸಿನಿಮಾ ಎನ್ನುವ ಬಣ್ಣದ ಜಗತ್ತು ನಂಬಿ ಬದುಕುವುದು ಉಂಟೆ? ಗೊತ್ತಿಲ್ಲದ ಕ್ಷೇತ್ರದಲ್ಲಿ ಹೇಗೆ ತಾನೆ ಭರವಸೆ ಇಟ್ಟುಕೊಳ್ಳುತ್ತೀಯಾ ಎಂದರು. ಆದರೂ ನನ್ನ ನಿರ್ಧಾರ ಅಚಲ ಆಗಿದ್ದರಿಂದ ಬದಲಾಗಲಿಲ್ಲ. ಹೇಗೋ ನನ್ನ ಸತತ ಪ್ರಯತ್ನದ ಫಲದಿಂದ ಅವಕಾಶ ಪಡೆದು ನೆಲೆ ನಿಂತಿದ್ದೇನೆ.

◆ **ಸಿನಿಮಾ ಕಥೆ ಎಲ್ಲಿಗೆ ಬಂದಿದೆ...**

ಒಂದೆರಡು ಸಿನಿಮಾಗಳಿಗೆ ಅವಕಾಶ ಬಂದಿದ್ದವು. ಅದಕ್ಕೆ ನಾನು ಸಕಾರಾತ್ಮಕವಾಗಿ ಸ್ಪಂದಿಸಿದ್ದೆ. ಮೇಲಿಂದ ಮೇಲೆ ಮಾತುಕತೆಯೂ ಆಯಿತು. ಹೀಗಿರುವಾಗಲೆ ಕೊರೊನಾ ಬಂದಿದೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಅದು ಅಲ್ಲಿಗೆ ನಿಂತಂತೆ ಆಗಿದೆ.

■ **ರಾಘವೇಂದ್ರ ಕೆ.**